ದಿಃ 01.03.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

**ಮುಖ್ಯ ವಿಚಾರಣೆಃ ಶ್ರೀ ಎನ್.ಎಸ್.ಜೆ., ವಕೀಲರಿಂದ ವಾದಿ ಪರವಾಗಿ**

1. ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ನನಗೆ ತಿಳಿದಿವೆ ಹಾಗೂ ಸತ್ಯವಾಗಿವೆ. ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ.

(ಮುಂದುವರೆದ ಮುಖ್ಯ ವಿಚಾರಣೆಗೆ ಕಾಲವಕಾಶ ಕೋರಿದ್ದು, ಕಾಲವಕಾಶ ನೀಡಲಾಯಿತು)

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

**ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,**
**ಮೂಡಿಗೆರೆ.**

ಸಾಕ್ಷಿಯ ಸಹಿ

ಮಾ

ದಿಃ 04.07.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

**ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ ಎನ್.ಎಸ್.ಜೆ., ವಕೀಲರಿಂದ ವಾದಿ ಪರವಾಗಿ**

2. ನನ್ನ ಅತ್ತೆಯು ದಿಃ 09.05.2001 ರಂದು ಬರೆದಿರುವ ನೊಂದಾಯಿತ ವೀಲು ನಾಮೆಯನ್ನು ಹಾಜರು ಮಾಡಿದ್ದು ನಿ.ಡಿ.1 ಎಂದು ಗುರುತಿಸಲಾಯಿತು, ದಿಃ 10.12.2016 ರಂದು ನನ್ನ ಅತ್ತೆ ಜಯಮ್ಮ ರವರು ಬರೆದಿರುವ ವೀಲು ನಾಮೆಯನ್ನು ಹಾಜರು ಮಾಡಿದ್ದು ನಿ.ಡಿ.2 ಎಂದು ಗುರುತಿಸಲಾಯಿತು,

(ಮುಂದುವರೆದ ಮುಖ್ಯ ವಿಚಾರಣೆಗೆ ಕಾಲವಕಾಶ ಕೋರಿದ್ದು, ಕಾಲವಕಾಶ ನೀಡಲಾಯಿತು)

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

**ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,**
**ಮೂಡಿಗೆರೆ.**

ಸಾಕ್ಷಿಯ ಸಹಿ

ಮಾ

ದಿಃ 30.08.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

ದಿಃ 30.08.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

**ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ ಎನ್.ಎಸ್.ಜೆ., ವಕೀಲರಿಂದ ಪ್ರತಿವಾದಿ ಪರವಾಗಿ**

3. ದಿಃ 26.04.1993 ರ ಕ್ರಯ ಪತ್ರವನ್ನು ಹಾಜರು ಮಾಡಿದ್ದು ನಿ.ಡಿ.3 ಎಂದು ಗುರುತಿಸಲಾಯಿತು, ಎಂ.ಆರ್. ನಂಬರ್ ಹೆಚ್.9/2021-22 ನ್ನು ಹಾಜರು ಮಾಡಿದ್ದು ನಿ.ಡಿ.4 ಎಂದು ಗುರುತಿಸಲಾಯಿತು, ಮೂಡಿಗೆರೆ ಗ್ರಾಮದ ಸರ್ವೆ ನಂಬರ್ 10/1 ಎ ಪಹಣಿ ಪತ್ರವನ್ನು ಹಾಜರು ಮಾಡಿದ್ದು ನಿ.ಡಿ.5 ಎಂದು ಗುರುತಿಸಲಾಯಿತು, ಮೂಡಿಗೆರೆ ಗ್ರಾಮದ ಸರ್ವೆ ನಂಬರ್ 10/1 ಎ ಪಹಣಿ ಪತ್ರವನ್ನು ಹಾಜರು ಮಾಡಿದ್ದು ನಿ.ಡಿ.6 ಎಂದು ಗುರುತಿಸಲಾಯಿತು, ಎಂ.ಆರ್.ನಂಬರ್ 25/1992-93 ರ ದೃಢೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಡಿ.7 ಎಂದು ಗುರುತಿಸಲಾಯಿತು, ನನ್ನ ಗಂಡ ಎಂ.ಎನ್. ನಿರಂಜನ್ ರವರ ಮರಣ ಪ್ರಮಾಣ ಪತ್ರವನ್ನು ಹಾಜರು ಮಾಡಿದ್ದು ನಿ.ಡಿ.8 ಎಂದು ಗುರುತಿಸಲಾಯಿತು, ಮೂಡಿಗೆರೆ ಪಟ್ಟಣ ಪಂಚಾಯಿತಿಯಿಂದ ನೀಡಿರುವ ನಮೂನೆಯನ್ನು ಹಾಜರು ಮಾಡಿದ್ದು ನಿ.ಡಿ.9 ಮತ್ತು 10 ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಶ್ರೀ ಕೆ.ಎಸ್.ಎ ವಕೀಲರಿಂದ ವಾದಿ ಪರವಾಗಿ**

4. ಪಾಟೀ ಸವಾಲು ಮಾಡಲು ಕಾಲವಕಾಶ ಕೋರಿದ್ದು, ಕಾಲವಕಾಶ ನೀಡಲಾಯಿತು.

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)
ಓ.ಹೇ.ಕೇ.ಸ.ಇ.ಎ.ಒ.

**ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,**
**ಮೂಡಿಗೆರೆ.**

ಸಾಕ್ಷಿಯ ಸಹಿ

ಮಾ

ದಿಃ 21.09.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

**ಪಾಟೀ ಸವಾಲು ಶ್ರೀ ಕೆ.ಎಸ್.ಎ ವಕೀಲರಿಂದ ವಾದಿ ಪರವಾಗಿ**

5. ಜಯಮ್ಮನವರಿಗೆ ಒಟ್ಟು 3 ಜನ ಮಕ್ಕಳಿರುತ್ತಾರೆ. ಜಯಮ್ಮನವರ ಮಗಳು ಮಂಜುಳ ಮತ್ತು ಮಗ ನಿರಂಜನ್ ಈಗ ಮೃತಪಟ್ಟಿರುತ್ತಾರೆ. ದಾವಾ ಸಿ ಶೆಡ್ಯೂಲ್ ಆಸ್ತಿಯ ಖಾತೆಯು ನನ್ನ ಗಂಡ ನಿರಂಜನ್ ಅವರ ಹೆಸರಿನಲ್ಲಿ ಇರುತ್ತದೆ. ನನ್ನ ಗಂಡ ನಿರಂಜನ್ ರವರಿಗೆ ದಾವಾ ಸಿ ಶೆಡ್ಯೂಲ್ ಆಸ್ತಿಯು ಅವರ ತಾಯಿಯ ದಾನ ಪತ್ರದ ಮೂಲಕ ಬಂದಿರುತ್ತದೆ. ಜಯಮ್ಮನವರಿಗೆ ಸದರಿ ಆಸ್ತಿಯು ಅವರ ಗಂಡ ನಾಗಪ್ಪನವರಿಂದ ಬಂದಿರುತ್ತದೆ. ನಾಗಪ್ಪನವರು ಮೃತಪಟ್ಟ ನಂತರ ವಾರಿಸು ನೆಲೆಯಲ್ಲಿ ಜಯಮ್ಮನವರ ಹೆಸರಿಗೆ ಖಾತೆ ಬದಲಾವಣೆ ಆಗಿರುತ್ತದೆ. ನಾಗಪ್ಪನವರು ಜಯಮ್ಮನ ಹೆಸರಿಗೆ ದಾವಾ ಸಿ ಶೆಡ್ಯೂಲ್ ಆಸ್ತಿಯ ಬಗ್ಗೆ ದಾಖಲಾತಿ ಮಾಡಿಕೊಟ್ಟಿರುತ್ತಾರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ನಾಗಪ್ಪನವರು ಸರ್ಕಾರಿ ನೌಕರಿಯಲ್ಲಿ ಇದ್ದು ದಾವಾ ಸಿ ಶೆಡ್ಯೂಲ್ ಆಸ್ತಿಯನ್ನು ಖರೀದಿ ಮಾಡಿರುತ್ತಾರೆ. ನಾಗಪ್ಪನವರು ಯಾವಾಗ ಮೃತಪಟ್ಟಿರುತ್ತಾರೆ ಎಂದು ನನಗೆ ನೆನಪಿಲ್ಲ. ನಾಗಪ್ಪನವರು ದಾವಾ ಸಿ ಶೆಡ್ಯೂಲ್ ಆಸ್ತಿಗೆ ಜಯಮ್ಮ ಮತ್ತು ಜಯಮ್ಮನ ಮಕ್ಕಳು ಹಕ್ಕುದಾರರು ಎಂದರೆ ಸರಿ. ಜಯಮ್ಮನವರು ನಿರಂಜನ್ ರವರ ಹೆಸರಿಗೆ ಮಾಡಿರುವ ದಾನ ಪತ್ರಕ್ಕೆ ಜಯಮ್ಮನವರ ಹೆಣ್ಣು ಮಕ್ಕಳು ಸಹಿ ಮಾಡಿರುವುದಿಲ್ಲ. ಜಯಮ್ಮನವರು ನಿರಂಜನ್ ರವರ ಹೆಸರಿಗೆ ಯಾವಾಗ ದಾನ ಪತ್ರ ಬರೆದಿರುತ್ತಾರೆ ಎಂದು ನನಗೆ ನೆನಪಿಲ್ಲ. ಜಯಮ್ಮನವರ ಚುನಾವಣಾ ಗುರುತಿನ ಚೀಟಿ, ಪಡಿತರ ಚೀಟಿ ಮತ್ತು ಆಧಾರ್ ಕಾರ್ಡ ಮೂಡಿಗೆರೆ ವಿಳಾಸದಲ್ಲೆ ಇತ್ತು. ನಿರಂಜನ್ ರವರ ಚುನಾವಣಾ ಗುರುತಿನ ಚೀಟಿ, ಪಡಿತರ ಚೀಟಿ ಮತ್ತು ಆಧಾರ್ ಕಾರ್ಡ ಚಿಕ್ಕಮಗಳೂರಿನ ವಿಜಯಪುರ ಬಡಾವಣೆ,

ಕನ್ನಡ ಪ್ರೈಮರಿ ಸ್ಕೂಲ್ ರಸ್ತೆ ವಿಳಾಸದಲ್ಲಿ ಇರುತ್ತದೆ. ನಾನು ಮದುವೆಯಾದ ನಂತರ ಸದರಿ ವಿಳಾಸದಲ್ಲಿ ವಾಸವಾಗಿರುತ್ತೇನೆ ಎಂದರೆ ಸಾಕ್ಷಿಯು ಉದ್ಯೋಗದಲ್ಲಿ ಬೇರೆ ಬೇರೆ ಕಡೆಗೆ ವರ್ಗಾವಣೆಗೊಂಡ ಕಾರಣ ಬೇರೆ ಬೇರೆ ವಿಳಾಸದಲ್ಲಿ ವಾಸವಾಗಿದ್ದು, ನನ್ನ ಗಂಡನ ನಿವೃತ್ತಿಯಾದ ನಂತರ ಮೇಲೆ ಹೇಳಿದ ಚಿಕ್ಕಮಗಳೂರಿನ ವಿಳಾಸದಲ್ಲಿ ವಾಸವಾಗಿರುತ್ತೇನೆ.

6. ನನ್ನ ಪತಿಯು ಅಜ್ಜಂಪುರ, ಶೃಂಗೇರಿ, ಆಲ್ದೂರು, ಮೂಡಿಗೆರೆ ಮತ್ತು ಕಡೂರು ತಾಲ್ಲೂಕಿನ ಹಳ್ಳಿಗಳಲ್ಲಿ ವರ್ಗಾವಣೆಗೊಂಡು ಕೆಲಸ ನಿರ್ವಹಿಸಿರುತ್ತಾರೆ. ನನ್ನ ಪತಿಯು ಮೂಡಿಗೆರೆಯಲ್ಲಿ ಯಾವ ವರ್ಷ ಕರ್ತವ್ಯ ನಿರ್ವಹಿಸಿರುತ್ತಾರೆ ಎಂದು ನನಗೆ ನೆನಪಿಲ್ಲ. ನನ್ನ ಪತಿಯು ಮೂಡಿಗೆರೆಯಲ್ಲಿ ಮೂರು ವರ್ಷಗಳ ಕಾಲ ಕೆಲಸ ನಿರ್ವಹಿಸಿರುತ್ತಾರೆ. ನನ್ನ ಮದುವೆಯ ಪೂರ್ವದಲ್ಲಿಯೇ ನನ್ನ ಪತಿಯು ದಾವಣಗೆರೆ ಜಿಲ್ಲೆ, ಚನ್ನಗಿರಿ ತಾಲ್ಲೂಕಿನ ಜೋಳದಾಳು ಗ್ರಾಮದಲ್ಲಿ ಸರ್ಕಾರಿ ನೌಕರಿಯಲ್ಲಿದ್ದರು. ನನ್ನ ಪತಿಯು ಮೂಡಿಗೆರೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವಾಗ ನಾನು ಚಿಕ್ಕಮಗಳೂರಿನಲ್ಲಿ ವಾಸವಾಗಿದ್ದೆನು. ಆ ಸಮಯದಲ್ಲಿ ನನ್ನ ಜೊತೆ ಮಕ್ಕಳು ವಾಸವಾಗಿದ್ದರು. ನನ್ನ ಮಕ್ಕಳು ಸದರಿ ಸಮಯದಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದರು.

7. ದಾವಾ ಎ ಶೆಡ್ಯೂಲ್ ಆಸ್ತಿಯಲ್ಲಿ ಎರಡು ಭಾಗ ಇತ್ತು ಎಂದರೆ ಸರಿ. ದಾವಾ ಎ ಶೆಡ್ಯೂಲ್ ಮನೆಯಲ್ಲಿ ಒಂದೊಂದು ಭಾಗದಲ್ಲಿ ನಾಲ್ಕು ನಾಲ್ಕು ಕೋಣೆಗಳು ಇರುತ್ತವೆ ಎಂದರೆ ಸರಿ. ಜಯಮ್ಮನವರು ಸದರಿ ಮನೆಯ ಒಂದು ಭಾಗವನ್ನು ಬಾಡಿಗೆಗೆ ನೀಡಿದ್ದರು ಎಂದರೆ ಸರಿ. ಜಯಮ್ಮನವರಿಗೆ ತಿಂಗಳಿಗೆ ಎರಡು ಸಾವಿರ ರೂಪಾಯಿ ಬಾಡಿಗೆ ಬರುತ್ತಿತ್ತು ಎಂದರೆ ಸರಿಯಲ್ಲ. ಜಯಮ್ಮನವರಿಗೆ ತಿಂಗಳಿಗೆ 1200-00 ರೂಪಾಯಿ ಬಾಡಿಗೆ ಬರುತ್ತಿತ್ತು. ಜಯಮ್ಮನವರಿಗೆ 2000-00 ರೂಪಾಯಿ ತಿಂಗಳಿಗೆ ಪಿಂಚಣಿ ಬರುತ್ತಿತ್ತು. ಜಯಮ್ಮನವರು ಮರಣ ಹೊಂದುವ ಸಮಯದಲ್ಲಿ ಅವರಿಗೆ 8-10 ಸಾವಿರ ರೂಪಾಯಿವರೆಗೆ

ಪಿಂಚಣಿ ಬರುತ್ತಿತ್ತು. ಜಯಮ್ಮನವರು ಮರಣ ಹೊಂದುವ ಸಮಯದಲ್ಲಿ ಅವರ ಖಾತೆಯಲ್ಲಿ 2 ಲಕ್ಷ ರೂಪಾಯಿ ಹಣ ಇತ್ತು. ಜಯಮ್ಮನವರ ಸಹೋದರನ ಮನೆಯು ಜಯಮ್ಮನವರ ಮನೆಯ ಪಕ್ಕದಲ್ಲಿ ಇರುತ್ತದೆ ಎಂದರೆ ಸರಿ. ಜಯಮ್ಮನವರು ಹೆಚ್ಚಿನ ಸಮಯದಲ್ಲಿ ಅವರ ಸಹೋದರನ ಮನೆಯಲ್ಲಿ ಇರುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಜಯಮ್ಮ ನವರು ದಾವಾ ಎ ಶೆಡ್ಯೂಲ್ ಆಸ್ತಿಯ ಬಾಡಿಗೆ ಹಣದಿಂದ ದಾವಾ ಬಿ ಶೆಡ್ಯೂಲ್ ಆಸ್ತಿಯನ್ನು ಖರೀದಿ ಮಾಡಿದ್ದರು ಎಂದರೆ ಸರಿಯಲ್ಲ. ದಾವಾ ಎ ಶೆಡ್ಯೂಲ್ ಆಸ್ತಿಗೆ ದಾವಾ ಬಿ ಶೆಡ್ಯೂಲ್ ಆಸ್ತಿಯು ಲಗತ್ತಾಗಿರುತ್ತದೆ ಎಂದರೆ ಸರಿ. ಬಿ ಶೆಡ್ಯೂಲ್ ಆಸ್ತಿಯು ಜಯಮ್ಮನವರ ತಂದೆಯ ಕುಟುಂಬಕ್ಕೆ ಸೇರಿತ್ತು ಎಂದರೆ ಸರಿ. ಜಯಮ್ಮನವರ ಹೆಸರಿಗೆ ದಾವಾ ಎ ಶೆಡ್ಯೂಲ್ ಆಸ್ತಿಯ ಖಾತೆ ಯಾವಾಗ ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ. ಜಯಮ್ಮನವರ ತಂದೆಯು ದಾವಾ ಶೆಡ್ಯೂಲ್ ಆಸ್ತಿಯನ್ನು ಜಯಮ್ಮನವರಿಗೆ ನೀಡಿರುತ್ತಾರೆ. ಜಯಮ್ಮನವರ ಹೆಸರಿಗೆ ಅವರ ತಂದೆಯು ದಾವಾ ಎ ಶೆಡ್ಯೂಲ್ ಆಸ್ತಿಯನ್ನು ಬರೆದುಕೊಟ್ಟಿರುವ ದಾಖಲಾತಿಯನ್ನು ನಾನು ನೋಡಿರುವುದಿಲ್ಲ.

8. ನಂಜಪ್ಪನವರು ದಾವಾ ಎ ಶೆಡ್ಯೂಲ್ ಆಸ್ತಿಯನ್ನು ಜಯಮ್ಮನವರಿಗೆ ನೀಡಿಲ್ಲ ಎಂದರೆ ಸರಿಯಲ್ಲ. ನಂಜಪ್ಪನವರು ಅವರ ಮಗಳಾದ ಜಯಮ್ಮರವರ ಮಕ್ಕಳದ ನಿರಂಜನ ನಿರ್ಮಲ ಮತ್ತು ಮಂಜುಳರವರಿಗೆ ವೀಲುನಾಮೆಯ ಮೂಲಕ ದಾವಾ ಎ ಶೆಡ್ಯೂಲ್ ಆಸ್ತಿಯನ್ನು ನೀಡಿರುತ್ತಾರೆ ಎಂದರೆ ಸರಿ. ಜಯಮ್ಮನ ಮಕ್ಕಳು ಸದರಿ ಸಮಯದಲ್ಲಿ ಅಪ್ರಾಪ್ತರಾದ ಕಾರಣ ಜಯಮ್ಮನವರ ಹೆಸರನ್ನು ಪೋಷಕರ ನೆಲೆಯಲ್ಲಿ ವೀಲುನಾಮೆಯಲ್ಲಿ ನಮೂದಿಸಿರುತ್ತಾರೆ ಎಂದರೆ ಸರಿ. ನಂಜಪ್ಪನವರು ಮೃತಪಡುವ ಸಮಯದಲ್ಲಿ ಜಯಮ್ಮನ ಮಕ್ಕಳು ಅಪ್ರಾಪ್ತ ವಯಸ್ಸಿನವರಾದ ಕಾರಣ ಜಯಮ್ಮನವರ ಹೆಸರಿಗೆ ದಾವಾ ಎ ಶೆಡ್ಯೂಲ್ ಆಸ್ತಿಯ ಖಾತೆ ಬದಲಾವಣೆ ಆಗಿರುತ್ತದೆ

ಎಂದರೆ ಸರಿ. ಜಯಮ್ಮನವರು ಮೃತಪಡುವವರೆಗೂ ಅವರ ಮಕ್ಕಳು ದಾವಾ ಎ ಶೆಡ್ಯೂಲ್ ಆಸ್ತಿಯ ಖಾತೆಯನ್ನು ಮಾಡುವಂತೆ ಕೇಳಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮಂದುವರೆದು ಜಯಮ್ಮನವರೇ ನಿರಂಜನ್ ರವರ ಹೆಸರಿಗೆ ನೊಂದಾಯಿತ ವೀಲುನಾಮೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನಿರಂಜನ್ ರವರ ಹೆಸರಿಗೆ ವೀಲು ನಾಮೆ ಬರೆಯಲು ಜಯಮ್ಮನವರಿಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಜಯಮ್ಮನವರು ನಿರಂಜನ್ ರವರ ಹೆಸರಿಗೆ 2001 ರಲ್ಲಿ ವೀಲುನಾಮೆ ಬರೆದಿರುತ್ತಾರೆ. ಜಯಮ್ಮನವರು ನಿರಂಜನ್ ರವರಿಗೆ ಬರೆದು ಕೊಟ್ಟಿರುವ ವೀಲುನಾಮೆಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಿರುತ್ತೇನೆ. ಜಯಮ್ಮನವರು ನಿರಂಜನ್ ರವರ ಹೆಸರಿಗೆ ಮಾಡಿರುವ ವೀಲುನಾಮೆಯನ್ನು ಯಾವುದೇ ಕಚೇರಿಗೆ ನಾನು ನೀಡಿರುವುದಿಲ್ಲ ಸಾಕ್ಷಿಯು ಮಂದುವರೆದು ಜಯಮ್ಮನವರ ಅಂತ್ಯ ಕ್ರಿಯೆ ಮಾಡುವ ಸಮಯದಲ್ಲಿ ಅವರ ಕುಟುಂಬಸ್ತರು ಸದರಿ ವೀಲು ನಾಮೆಯನ್ನು ಪೂರ್ಣೇಶ್ ರವರು ಪಂಚಾಯ್ತಿದಾರರ ಸಮಕ್ಷಮ ನನ್ನ ಪತಿಗೆ ನೀಡಿರುತ್ತಾರೆ.

(ಮುಂದುವರೆದ ಪಾಟೀ ಸವಾಲು ಮಾಡಲು ಕಾಲವಕಾಶ ಕೋರಿದ್ದು, ಕಾಲವಕಾಶ ನೀಡಲಾಯಿತು.)

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

**ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,**
**ಮೂಡಿಗೆರೆ.**

ಸಾಕ್ಷಿಯ ಸಹಿ

ದಿಃ 19.10.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

**ಪಾಟೀ ಸವಾಲು ಶ್ರೀ ಕೆ.ಎಸ್.ಎ ವಕೀಲರಿಂದ ವಾದಿ ಪರವಾಗಿ**

9. ಜಯಮ್ಮ ರವರ ವೀಲು ನಾಮೆಯು ಜಯಮ್ಮ ರವರು ಮೃತಪಟ್ಟ ಎಷ್ಟು ದಿನಗಳ ನಂತರ ನಿಮ್ಮ ಕೈಗೆ ಸಿಕ್ಕಿರುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿಯು ಸದರಿ ದಾಖಲೆಯು ನನ್ನ ಗಂಡನ ಬಳಿ ಇತ್ತು ಯಾವಾಗ ಸಿಕ್ಕಿರುತ್ತದೆ ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಿಃ 10.12.2016 ರ ನಿ.ಡಿ.2 ವೀಲು ನಾಮೆಯನ್ನು ಜಯಮ್ಮ ರವರ ತಿಥಿ ಆದ ದಿನ ಪಂಚಾಯಿತಿದಾರರು ಸದರಿ ದಾಖಲೆಯನ್ನು ಓದಿ ಮರು ದಿನ ಪಂಚಾಯಿತುದಾರರಾದ ಪೂರ್ಣೇಶ್ ರವರು ನನ್ನ ಕೈಗೆ ನಿ.ಡಿ.2 ದಾಖಲೆಯನ್ನು ನೀಡಿರುತ್ತಾರೆ. ಜಯಮ್ಮ ರವರು ಮೃತಪಟ್ಟು ಒಂದು ತಿಂಗಳ ತಿಥಿಯ ದಿನದಂದು ಸದರಿ ಪಂಚಾಯಿತಿಯು ಆಗಿರುತ್ತದೆ. ಸದರಿ ಪಂಚಾಯಿತಿಯ ದಿನ ತಿಥಿ ಊಟಕ್ಕೆ ಬಂದ ಸುಮಾರು 150 ಜನ ಇದ್ದರು. ಜಯಮ್ಮ ರವರ ತಿಥಿಯ ದಿನ ನನ್ನ ಯಜಮಾನರು ಹಾಜರಿದ್ದರು. ಈಗ ದಾವ ಎ ಶೆಡ್ಯೂಲ್ ಆಸ್ತಿಯ ಖಾತೆಯು ನನ್ನ ಹೆಸರಿನಲ್ಲಿ ಇರುತ್ತದೆ. ದಾವ ಎ ಶೆಡ್ಯೂಲ್ ಆಸ್ತಿಯ ಖಾತೆಯು ನನ್ನ ಹೆಸರಿಗೆ ಆಗುವ ಪೂರ್ವದಲ್ಲಿ ಜಯಮ್ಮ ರವರ ಹೆಸರಿನಲ್ಲಿ ಇತ್ತು. ದಾವ ಎ ಶೆಡ್ಯೂಲ್ ಆಸ್ತಿಯ ಖಾತೆಯು ನನ್ನ ಪತಿಯ ಹೆಸರಿನಲ್ಲಿ ದಾಖಲಾಗಿತ್ತು. ಜಯಮ್ಮ ರವರು ಮೃತಪಟ್ಟ 2 ತಿಂಗಳ ನಂತರ ನನ್ನ ಪತಿಯ ಹೆಸರಿಗೆ ಖಾತೆ ದಾಖಲಾಗಿರುತ್ತದೆ ಆದರೆ ನನಗೆ ದಿನಾಂಕ ನೆನಪಿಲ್ಲ. ಪಂಚಾಯಿತಿ ಸಮಯದಲ್ಲಿ ಪಂಚಾಯಿತಿಯ ಬಗ್ಗೆ ಯಾವುದೇ ಬರವಣಿಗೆಯಾಗಿರುವುದಿಲ್ಲ. 2016 ರಲ್ಲಿ ಜಯಮ್ಮ ರವರು ಪೂರ್ಣೇಶ್, ಶಿವಾನಂದಪ್ಪ, ಸತೀಶ, ಪ್ರೇಮಚಂದ್ರ ರವರ ಸಮುಖದಲ್ಲಿ ಒಂದು ವೀಲು ನಾಮೆಯನ್ನು ಬರೆದಿರುತ್ತಾರೆ. 2016 ರಲ್ಲಿ ಜಯಮ್ಮ ರವರು ವೀಲು ನಾಮೆಯ ಬರೆದಿರುವ ಸಮಯದಲ್ಲಿ ನಾನು ಮತ್ತು ನನ್ನ ಪತಿಯು ಹಾಜರಿರಲಿಲ್ಲ. 2016 ರಲ್ಲಿ

ಜಯಮ್ಮ ರವರು ಬರೆದಿದ್ದಾರೆ ಎಂದು ಹೇಳಿದ ವೀಲು ನಾಮೆ ನನಗೆ ಪಂಚಾಯಿತಿದಾರರು ಸದರಿ ವೀಲು ನಾಮೆಯಾದ 15 ದಿನದಲ್ಲಿ ನನಗೆ ತಿಳಿಸಿರುತ್ತಾರೆ. ಪೂರ್ಣೇಶ್, ಶಿವಾನಂದಪ್ಪ, ಸತೀಶ, ಪ್ರೇಮಚಂದ್ರ ರವರು ನನ್ನ ಕುಟುಂಬದವರೇ ಎಂದರೆ ಸರಿ. ನಿ.ಡಿ.1 ವೀಲು ನಾಮೆಯನ್ನು ಚಿಕ್ಕಮಗಳೂರಿನ ವಕೀಲರು ಬರೆದಿರುತ್ತಾರೆ. ಅವರ ಹೆಸರು ನನಗೆ ಗೊತ್ತಿಲ್ಲ. ನಿ.ಡಿ.1 ದಾಖಲೆಗೆ ಹರೀಶ್ ಮತ್ತು ನನ್ನ ಪತಿಯ ಸ್ನೇಹಿತರಾದ ತ್ರೀವಿಕ್ರಂ ಫಾರೆಸ್ಟರ್ ರವರು ಸಹಿ ಹಾಕಿರುತ್ತಾರೆ. ಹರೀಶ್ ರವರು ನನ್ನ ಅಕ್ಕನ ಮಗನಾಗಿರುತ್ತಾರೆ. ಸದರಿ ತ್ರೀವಿಕ್ರಂ ರವರು ಆಲ್ದೂರಿನಲ್ಲಿ ಫಾರೆಸ್ಟರ್ ಆಗಿದ್ದರು. ನನ್ನ ಪತಿಯು ಉಪ ವಲಯ ಅರಣ್ಯ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು. 2001 ರಲ್ಲಿ ನನ್ನ ಪತಿಯು ಅರಣ್ಯ ಇಲಾಖೆಯಲ್ಲಿ ಕರ್ತವ್ಯದಲ್ಲಿ ಇರುವಾಗಲೇ ಜಯಮ್ಮ ರವರು 2001 ರ ವೀಲು ನಾಮೆಯನ್ನು ಬರೆದಿರುತ್ತಾರೆ. ನಿ.ಡಿ.1 ದಾಖಲೆಗೆ ಸಹಿ ಹಾಕಿರುವ ಸಾಕ್ಷಿದಾರರಾದ ಹರೀಶ್ ರವರು ಮುಗುಳುವಳ್ಳಿ ನಿವಾಸಿಯಾಗಿರುತ್ತಾರೆ. ನಿ.ಡಿ.1 ದಾಖಲೆಗೆ ಹರೀಶ್ ರವರು ಸಹಿ ಮಾಡುವ ಸಮಯದಲ್ಲಿ ಆತನಿಗೆ 27-28 ವರ್ಷ ವಯಸ್ಸಾಗಿತ್ತು. ಹರೀಶ್ ರವರ ತಾಯಿಯ ಹೆಸರು ಗಿರಿಜಮ್ಮ ಆಗಿರುತ್ತದೆ. ಸದರಿ ಗಿರಿಜಮ್ಮ ನನ್ನ ಸ್ವಂತ ಅಕ್ಕನಾಗಿರುತ್ತಾರೆ. ನಿ.ಡಿ.1 ದಾಖಲೆಗೆ ಸಹಿ ಹಾಕಿರುವ ತ್ರೀವಿಕ್ರಂ ರವರು ನನ್ನ ಸಮುದಾಯಕ್ಕೆ ಸೇರಿದವರು ಎಂದರೆ ಸರಿಯಲ್ಲ. ವೀಲು ನಾಮೆ ಮಾಡಲು ಜಯಮ್ಮ ರವರು ಅವರಾಗಿಯೇ ಚಿಕ್ಕಮಗಳೂರಿಗೆ ಬಂದಿರುತ್ತಾರೆ. ವೀಲು ನಾಮೆಯ ಸಾಕ್ಷಿದಾರರನ್ನು ಜಯಮ್ಮ ರವರೇ ಕರೆಸಿರುತ್ತಾರೆ. ಸಾಕ್ಷಿದಾರರನ್ನು ಕರೆಯುವಂತೆ ಜಯಮ್ಮ ರವರು ನನ್ನ ಬಳಿ ಹೇಳಿರುತ್ತಾರೆ. ಹರೀಶ್ ಮತ್ತು ತ್ರೀವಿಕ್ರಂ ರವರನ್ನು ಕರೆಯುವಂತೆ ಜಯಮ್ಮ ರವರೇ ನನ್ನ ಬಳಿ ತಿಳಿಸಿರುತ್ತಾರೆ.

10. ನಿ.ಡಿ.1 ವೀಲು ನಾಮೆ ಆಗುವ ಪೂರ್ವದಲ್ಲಿ ದಾವ ಸಿ ಶೆಡ್ಯೂಲ್ ಆಸ್ತಿಯ ಬಗ್ಗೆ ದಾನ ಪತ್ರವನ್ನು ಜಯಮ್ಮ ರವರು ನಿರಂಜನ್ ಮತ್ತು ಸತೀಶ್ ರವರ ಹೆಸರಿಗೆ ಬರೆದ್ದಿರು. ನಿ.ಪಿ.3 ದಾನ ಪತ್ರಕ್ಕೆ ಹರೀಶ್ ಮತ್ತು ತ್ರೀವಿಕ್ರಂ ರವರು ಸಾಕ್ಷಿದಾರರಾಗಿ ಸಹಿ ಹಾಕಿರುತ್ತಾರೆ. ನಿ.ಪಿ.3 ದಾಖಲೆಗೆ ಸಹಿ ಹಾಕಿರುವ ಸಾಕ್ಷಿದಾರರನ್ನು ಜಯಮ್ಮ ರವರ ಹೇಳಿಕೆಯ ಮೇರೆಗೆ ನನ್ನ ಪತಿ ನಿರಂಜನ್ ರವರು ಕರೆಸಿರುತ್ತಾರೆ. ನಿ.ಪಿ.3 ಮತ್ತು ನಿ.ಡಿ.1 ದಾಖಲೆಯನ್ನು ಜಯಮ್ಮ ರವರಿಗೆ ಸುಳ್ಳು ಮಾಹಿತಿಯನ್ನು ನೀಡಿ ನಾನು ಮತ್ತು ನನ್ನ ಪತಿ ನಿರಂಜನ್ ರವರು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ಮನೆ ಕಟ್ಟಲು ಸಾಲದ ಅವಶ್ಯಕತೆ ಇದೆ ಎಂದು ಜಯಮ್ಮ ರವರನ್ನು ನಂಭಿಸಿ ನೊಂದಾವಣಿ ಕಚೇರಿಯಲ್ಲಿ ಸಹಿ ಹಾಕಬೇಕು ಎಂದು ಜಯಮ್ಮ ರವರಿಗೆ ತಿಳಿಸಿ ನಿ.ಪಿ.3 ಮತ್ತು ನಿ.ಡಿ.1 ದಾಖಲೆಯನ್ನು ನಾನು ಮತ್ತು ನನ್ನ ಪತಿಯು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಮನೆಯಿಂದ ಮುಗುಳುವಳ್ಳಿಯಲ್ಲಿ ಇರುವ ಹರೀಶ್ ರವರ ಮನೆಗೆ 6 ಕಿ.ಮೀ ಅಂತರ ಇರುತ್ತದೆ. ನಮ್ಮ ಮನೆಗೂ ತ್ರೀವಿಕ್ರಂ ರವರ ಮನೆಗೂ 3 ಕಿ.ಮೀ ಅಂತರ ಇರುತ್ತದೆ. ವಾದಿ ಮತ್ತು ವಾದಿಯ ತಂಗಿ ಮಂಜುಳಾ ರವರು ನಿ.ಪಿ.3 ದಾಖಲೆಗೆ ಸಹಿ ಮಾಡಿರುವುದಿಲ್ಲ. ವಾದಿ ಮತ್ತು ಅವರ ಸಹೋದರಿ ಮಂಜುಳಾ ರವರ ಗಮನಕ್ಕೆ ಬಾರದೇ ನಾವು ನಿ.ಪಿ.3 ದಾನ ಪತ್ರ ಮತ್ತು ನಿ.ಡಿ.1 ವೀಲು ನಾಮೆಗೆ ಜಯಮ್ಮ ರವರ ಸಹಿ ಮಾಡಿಸಿರುತ್ತೇವೆ ಎಂದರೆ ಸರಿಯಲ್ಲ. ವಾದಿಯ ಗಂಡ ಬಸವರಾಜ್ ರವರು ಮೂಡಿಗೆರೆಯ ಎಂ.ಜಿ.ಎಂ ಆಸ್ಪತ್ರೆಯಲ್ಲಿ Health Inspector ಆಗಿ 15 ವರ್ಷಗಳ ಕಾಲ ಕರ್ತವ್ಯ ನಿರ್ವಹಿಸಿದ್ದರು ಎಂದರೆ ಸರಿ. ಬಸವರಾಜ್ ರವರು ಸೇವೆಯಲ್ಲಿ ಇರುವಾಗಲೇ ಮರಣ ಹೊಂದಿರುತ್ತಾರೆ ಎಂದರೆ ಸರಿ. ಬಸವರಾಜ್ ರವರು ಮೂಡಿಗೆರೆಯಲ್ಲಿ ಸೇವೆಯಲ್ಲಿ ಇರುವಾಗ ಅವರ ಹೆಂಡತಿ ಮತ್ತು ಮಕ್ಕಳು ಜಯಮ್ಮ ರವರ ಮೂಡಿಗೆರೆ ಮನೆಯಲ್ಲಿ ವಾಸವಾಗಿದ್ದರು ಎಂದರೆ ಸರಿ.

ನಿರ್ಮಲ ಮತ್ತು ಜಯಮ್ಮ ರವರು ಒಟ್ಟಿಗೆ ಊಟ ಉಪಚಾರ ಮಾಡುತ್ತಿದ್ದರು ಎಂದರೆ ಸರಿ. ಸಾಕ್ಷಿಯು ಮುಂದುವರೆದು ವಾದಿಯ ಗಂಡ ಜಯಮ್ಮ ರವರಿಗೆ ತುಂಬಾ ತೊಂದರೆ ನೀಡುತ್ತಿದ್ದರು ಎಂದು ನುಡಿಯುತ್ತಾರೆ. ಜಯಮ್ಮ ರವರಿಗೆ ಬಸವರಾಜ್ ರವರು ತೊಂದರೆ ನೀಡಿದ ಬಗ್ಗೆ ಪೊಲೀಸ್ ಕೇಸು ಆಗಿದೆಯಾ ಎಂಬ ಪ್ರಶ್ನೆಗೆ ಸಾಕ್ಷಿಯು ಜಯಮ್ಮ ರವರು ದೂರು ನೀಡಲು ಹೋದಾಗ ನನ್ನ ಗಂಡ ದೂರು ನೀಡುವುದು ಬೇಡ ಎಂದು ತಿಳಿಸಿರುತ್ತಾರೆ ಎಂದು ನುಡಿಯುತ್ತಾರೆ. ಬಸವರಾಜ್ ರವರು ಜಯಮ್ಮ ರವರಿಗೆ ತೊಂದರೆ ನೀಡುತ್ತಿದ್ದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಬಸವರಾಜ್ ರವರು ಮೃತಪಟ್ಟ ನಂತರ ಅನುಕಂಪದ ಆಧಾರದಲ್ಲಿ ಅವರ ಮಗ ನವೀನ್ ರವರಿಗೆ ಸರ್ಕಾರಿ ಉದ್ಯೋಗ ಸಿಕ್ಕಿರುತ್ತದೆ ಎಂದರೆ ಸರಿ. ಬಸವರಾಜ್ ರವರ ಮಗ ನವೀನ್ ಮೂಡಿಗೆರೆಯಲ್ಲಿ ಮತ್ತು ದಾರದಹಳ್ಳಿಯಲ್ಲಿ ಗ್ರಾಮ ಲೆಕ್ಕಿಗರು ಆಗಿ ಕರ್ತವ್ಯ ನಿರ್ವಹಿಸುತ್ತಿದ್ದರು ಎಂದರೆ ಸರಿ. ಬಸವರಾಜ್ ರವರ ಮಗ ನವೀನ್ ಮೂಡಿಗೆರೆಯಲ್ಲಿ 10 ವರ್ಷಗಳ ಕಾಲ ಕರ್ತವ್ಯ ನಿರ್ವಹಿಸಿರುತ್ತಾರೆ. ನವೀನ್ ಮೂಡಿಗೆರೆಯಲ್ಲಿ ಗ್ರಾಮ ಲೆಕ್ಕಿಗನಾಗಿ ಕರ್ತವ್ಯ ನಿರ್ವಹಿಸುತ್ತಿರುವಾಗ ಜಯಮ್ಮ ರವರ ಜೊತೆ ವಾಸವಾಗಿದ್ದರು ಎಂದರೆ ಸರಿ. ವಾದಿ ಮತ್ತು ಅವರ ಮಕ್ಕಳು ಸಹ ಜಯಮ್ಮ ರವರ ಜೊತೆ ವಾಸವಾಗಿದ್ದರು ಎಂದರೆ ಸರಿ. ಜಯಮ್ಮ ರವರನ್ನು ಅವರ ವೃದ್ದಾಪ್ಯದಲ್ಲಿ ವಾದಿಯೇ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ.

11. ವಾದಿ ಮತ್ತು ಜಯಮ್ಮ ರವರಿಗೆ ಹೊಡೆದಾಟ ಗಲಾಟೆಗಳು ನಡೆದಿರುತ್ತವೆ. ಯಾವ ದಿನಾಂಕದಂದು ವಾದಿ ಮತ್ತು ಜಯಮ್ಮ ರವರ ನಡುವೆ ಗಲಾಟೆಯಾಗಿರುತ್ತದೆ ಎಂದು ನನಗೆ ನೆನಪಿಲ್ಲ. ವಾದಿ ಮತ್ತು ಜಯಮ್ಮ ರವರ ನಡುವೆ ಗಲಾಟೆ ನಡೆಯುತ್ತಿತ್ತು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹಣದ ವಿಚಾರವಾಗಿ ವಾದಿ ಮತ್ತು ಜಯಮ್ಮ ರವರ ನಡುವೆ

ಗಲಾಟೆ ನಡೆಯುತ್ತಿತ್ತು. ವಾದಿಯ ಗಂಡ ಬಸವರಾಜ್ ಮತ್ತು ವಾದಿಯ ಮಗ ನವೀನ್ ಮದ್ಯಪಾನ ಸೇವನೆಗಾಗಿ ಜಯಮ್ಮನ ಬಳಿ ಹಣ ಕೇಳುತ್ತಿದ್ದರು, ಸದರಿ ವಿಚಾರವಾಗಿ ಗಲಾಟೆ ನಡೆಯುತ್ತಿತ್ತು. ವಾದಿಗೆ ಮದ್ಯಪಾನ ಸೇವನೆ ಮಾಡವ ಅಭ್ಯಾಸ ಇರಲಿಲ್ಲ. ವಾದಿಗೆ ಹಣದ ಅವಶ್ಯಕತೆ ಇರಲಿಲ್ಲ ಎಂದರೆ ಸರಿಯಲ್ಲ. ವಾದಿಯ ಗಂಡ ಮತ್ತು ಮಗ ಮದ್ಯಪಾನ ಮಾಡುವುದರಿಂದ ವಾದಿಯ ಬಗ್ಗೆ ಜಯಮ್ಮ ರವರಿಗೆ ಅನುಕಂಪ ಇತ್ತು ಎಂದರೆ ಸರಿ. ನನ್ನ ಪತಿಗೆ ನಿವೃತ್ತಿಯಾಗುವ ಸಮಯದಲ್ಲಿ ರೂ.48,000-00 ಸಂಬಳ ಇತ್ತು. ನನ್ನ ಗಂಡ ಆರ್ಥಿಕವಾಗಿ ಚೆನ್ನಾಗಿ ಇದ್ದರು ಎಂದರೆ ಸಾಕ್ಷಿಯು ಮಕ್ಕಳ ವಿಧ್ಯಾಭ್ಯಾಸಕ್ಕಾಗಿ ಸಾಲ ಮಾಡಿ ಕಷ್ಟದಲ್ಲಿ ಇದ್ದರು ಎಂದು ನುಡಿಯುತ್ತಾರೆ. ನಾನು ಮತ್ತು ನನ್ನ ಯಜಮಾನರು ಸೇರಿ ನನ್ನ ಮಗಳಿಗೆ ಬೆಳ್ತಂಗಡಿಯಲ್ಲಿ ಮನೆ ತೆಗೆಸಿಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಅಳಿಯ ಬೆಳ್ತಂಗಡಿ ತಾಃ ನಿಡ್ಲೆಯಲ್ಲಿ ಅಧ್ಯಾಪಕರಾಗಿದ್ದರು. ನನ್ನ ಅಳಿಯ ಬೆಳ್ತಂಗಡಿಯಲ್ಲಿ ಮನೆ ಕಟ್ಟಿಸಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸಾಲ ತೀರಿಸಲು ಸದರಿ ಮನೆಯನ್ನು ಮಾರಾಟ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ಮಗಳನ್ನು ಮದುವೆಯಾದ 9 ವರ್ಷಗಳ ನಂತರ ನನ್ನ ಅಳಿಯ ಮನೆ ಕಟ್ಟಿಸಿರುತ್ತಾರೆ. ನನ್ನ ಮಗಳ ಮದುವೆಯಾಗುವ ಸಮಯದಲ್ಲಿ ನನ್ನ ಪತಿಯು ನೌಕರಿಯಲ್ಲಿ ಇದ್ದರು. ನನ್ನ ಪತಿಯ ಆದಾಯದಲ್ಲಿ ನನ್ನ ಪತಿಯು ನನ್ನ ಮಗಳ ಮದುವೆ ಮತ್ತು ಮಕ್ಕಳ ವಿಧ್ಯಾಭ್ಯಾಸ ಮಾಡಿಸಿರುತ್ತಾರೆ ಎಂದರೆ ಸರಿ. ನನ್ನ ಪತಿಯ ನಿವೃತ್ತಿ ಹಣದಲ್ಲಿ ನನ್ನ ಅಳಿಯನಿಗೆ ಮನೆ ಕಟ್ಟಲು ನನ್ನ ಪತಿಯು ಹಣ ನೀಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಪತಿಯ ನಿವೃತ್ತಿ ಹಣದಿಂದ ಚಿಕ್ಕಮಗಳೂರಿನಲ್ಲಿ ನನ್ನ ಪತಿಯು ಮನೆ ಕಟ್ಟಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮನೆ ಕಟ್ಟಲು ನಾವು ಬ್ಯಾಂಕಿನಲ್ಲಿ ಸಾಲ ಪಡೆದಿರುವುದಿಲ್ಲ, ಕುಟುಂಬದಲ್ಲಿ ಸಾಲ ಪಡೆದು ಮನೆ ಕಟ್ಟಿರುತ್ತೇವೆ ಎಂದು

ನುಡಿಯುತ್ತಾರೆ. ಜಯಮ್ಮ ರವರಿಂದ ಹಣ ಪಡೆದು ಚಿಕ್ಕಮಗಳೂರಿನಲ್ಲಿ ನನ್ನ ಗಂಡ ಮನೆ ರಿಪೇರಿ ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಗಂಡ ಚಿಕ್ಕಮಗಳೂರಿನಲ್ಲಿ ಹೊಸ ಮನೆ ಕಟ್ಟಿಸಿದ ಬಗ್ಗೆ ನಾನು ನ್ಯಾಯಾಲಯಕ್ಕೆ ದಾಖಲಾತಿಯನ್ನು ನೀಡಿರುವುದಿಲ್ಲ. ನನ್ನ ಯಜಮಾನರ ನಿವೃತ್ತಿ ಹಣದಿಂದ ಚಿಕ್ಕಮಗಳೂರಿನಲ್ಲಿ ಇರುವ ಮನೆಯಲ್ಲಿ ಕಟ್ಟಿಸಿರುತ್ತೇವೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿವೃತ್ತಿ ಹಣ ಬಂದ ಬಗ್ಗೆ ನಾನು ನ್ಯಾಯಾಲಯಕ್ಕೆ ದಾಖಲಾತಿಯನ್ನು ಹಾಜರು ಮಾಡಿರುವುದಿಲ್ಲ.

(ಮುಂದುವರೆದ ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿರುತ್ತಾರೆ. ನೀಡಲಾಗಿದೆ. )

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

**ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,**
**ಮೂಡಿಗೆರೆ.**

ಸಾಕ್ಷಿಯ ಸಹಿ

ಮಾ

ದಿಃ 12.11.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

**ಮುಂದುವರೆದ ಪಾಟೀ ಸವಾಲು ಶ್ರೀ ಕೆ.ಎಸ್.ಎ ವಕೀಲರಿಂದ ವಾದಿ ಪರವಾಗಿ**

12. ನಿ.ಡಿ.2 ವೀಲು ನಾಮೆಯನ್ನು ತಯಾರು ಮಾಡುವ ಸಮಯದಲ್ಲಿ ನಾನು ಹೋಗಿ ನೋಡಿರುವುದಿಲ್ಲ. ನಿ.ಡಿ.2 ವೀಲು ನಾಮೆಯನ್ನು ಪಂಚಾಯಿತಿದಾರರಿಂದ ಪಡೆಯಲು ನಾನು ಪ್ರಯತ್ನ ಪಟ್ಟಿರುವುದಿಲ್ಲ. ನಿ.ಡಿ.2 ವೀಲು ನಾಮೆಯನ್ನು ಎಲ್ಲಿ ಬರೆಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಪಂಚಾಯಿತಿದಾರರಾದ ಪೂರ್ಣೇಶ್ ರವರು ಕಂದಾಯ ಇಲಾಖೆಯಲ್ಲಿ ಕಂದಾಯ ನಿರೀಕ್ಷಕರಾಗಿದ್ದರು ಎಂದರೆ ಸರಿ. 2016 ರಲ್ಲಿ ಪೂರ್ಣೇಶ್ ರವರು ನಿವೃತ್ತರಾಗಿದ್ದರು. ಪೂರ್ಣೇಶ್ ಮತ್ತು ಅವರ ಮಗ ಈಗ ಕಾಫಿ ವ್ಯವಹಾರವನ್ನು ಮಾಡಿಕೊಂಡಿರುತ್ತಾರೆ ಎಂದರೆ ಸರಿ. ದಾವ ಎ ಮತ್ತು ಬಿ ಶೆಡ್ಯೂಲ್ ಆಸ್ತಿಗಳನ್ನು ನನ್ನ ಮತ್ತು ನನ್ನ ಪತಿಯ ಹೆಸರಿಗೆ ಮಾಡಿಕೊಟ್ಟರೆ ಪೂರ್ಣೇಶ್ ರವರಿಗೆ ಕಡಿಮೆ ಕ್ರಯಕ್ಕೆ ಮಾರಾಟ ಮಾಡುತ್ತೇನೆ ಎಂದು ನಾನು ಒಪ್ಪಿದ್ದೆನು ಎಂದರೆ ಸರಿಯಲ್ಲ. ಕಾಫಿ ಗೊಡಾನ್ ಮಾಡಲು ಪೂರ್ಣೇಶ್ ರವರಿಗೆ ಸದರಿ ಆಸ್ತಿಯು ಅನುಕೂಲ ಆಗುತ್ತದೆ ಎಂದು ಪೂರ್ಣೇಶ್ ರವರು ಒಪ್ಪಿದ್ದರು ಎಂದರೆ ಸರಿಯಲ್ಲ. ಪೂರ್ಣೇಶ್ ರವರು ಲಂಚ ತೆಗೆದುಕೊಂಡ ಬಗ್ಗೆ ಅವರ ವಿರುದ್ದ ಪ್ರಕರಣ ದಾಖಲಾಗಿತ್ತು ಎಂದರೆ ಸಾಕ್ಷಿಯು ಪೂರ್ಣೇಶ್ ರವರ ವಯಕ್ತಿಕ ವಿಚಾರಗಳು ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಪೂರ್ಣೇಶ್ ರವರಿಗೆ ಜಿಲ್ಲಾ ನ್ಯಾಯಾಲಯದಲ್ಲಿ ಶಿಕ್ಷೆಯಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಪೂರ್ಣೇಶ್ ರವರಿಗೆ ಸದರಿ ಪ್ರಕರಣದಲ್ಲಿ ನಾನು, ನನ್ನ ಯಜಮಾನರು ಮತ್ತು ಇಂದ್ರೇಶ್ ರವರು ಜಾಮೀನು ಕೊಡಿಸಿರುತ್ತೇವೆ ಎಂದರೆ ಸರಿಯಲ್ಲ. ಪೂರ್ಣೇಶ್ ರವರು 10 ವರ್ಷಗಳ ಹಿಂದೆ ದೊಡ್ಡ ಮನೆ ಕಟ್ಟಿಸಿರುತ್ತಾರೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ.

ಪೂರ್ಣೇಶ್ ರವರಿಗೆ ಮನೆ ಕಟ್ಟಲು ಮರಮುಟ್ಟುಗಳನ್ನು ನನ್ನ ಪತಿಯೇ ಸರಬರಾಜು ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಅತ್ತೆಯ ತಿತಿ ಕಾರ್ಯವನ್ನು ಪೂರ್ಣೇಶ್ ರವರ ಮನೆಯಲ್ಲಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಪತಿ ಮತ್ತು ಪೂರ್ಣೇಶ್ ರವರು ಸಹಪಾಟಿಗಳಾಗಿರುತ್ತಾರೆ ಎಂದರೆ ಸರಿ. ವಾದಿಯ ತಂಗಿಯನ್ನು ಪೂರ್ಣೇಶ್ ರವರಿಗೆ ಮದುವೆ ಮಾಡಿಕೊಡಬೇಕು ಎಂದು ನನ್ನ ಪತಿಯು ಮತ್ತು ಪೂರ್ಣೇಶ್ ವಾದಿಯ ಬಳಿ ಕೇಳಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಸಮಯದಲ್ಲಿ ವಾದಿಯು ಸಮ್ಮತಿ ಸೂಚಿಸಿರಲಿಲ್ಲ ಎಂದರೆ ಸಾಕ್ಷಿಯು ಪೂರ್ಣೇಶ್ ರವರು ವಾದಿಯ ತಂಗಿಯನ್ನು ಮದುವೆಯಾಗು ಕೇಳಿರುವುದಿಲ್ಲ ಎಂದು ನುಡಿಯುತ್ತಾರೆ. ವಾದಿಯ ತಂಗಿಯನ್ನು ಪೂರ್ಣೇಶ್ ರವರಿಗೆ ಮದುವೆ ಮಾಡಿಕೊಡಲು ವಾದಿ ಒಪ್ಪದ ಕಾರಣ ನನಗೆ ನನ್ನ ಪತಿಗೆ ಮತ್ತು ಪೂರ್ಣೇಶ್ ರವರಿಗೆ ವಾದಿಯ ವಿರುದ್ದ ವೈಮನಸ್ಸು ಇತ್ತು ಎಂದರೆ ಸರಿಯಲ್ಲ. ಸದರಿ ಕಾರಣದಿಂದಲೇ ಪೂರ್ಣೇಶ್ ಮತ್ತು ನನ್ನ ಪತಿ ಹಾಗೂ ನಾನು ಮತ್ತು ನಿ.ಡಿ.2 ದಾಖಲೆಗೆ ಸಹಿ ಮಾಡಿರುವ ಸಾಕ್ಷಿದಾರರು ಸದರಿ ದಾಖಲೆಯನ್ನು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ನಿ.ಡಿ.2 ದಾಖಲೆಯನ್ನು ಈ ದಾವೆಯನ್ನು ದಾಖಲು ಮಾಡಿದ ನಂತರ ವಾದಿಯು ಈ ದಾವೆಯಲ್ಲಿ ತೆಗೆದುಕೊಂಡಿರುವ ಪ್ರತಿಪಾದನೆಗಳನ್ನು ಪ್ರತಿಪಾದಿಸಿ ವಾದ ಪತ್ರಕ್ಕೆ ವಿರುದ್ದವಾಗಿ ನಿ.ಡಿ.2 ದಾಖಲೆಯನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಕಾರಣದಿಂದಲೇ ಈ ದಾವೆಯಲ್ಲಿ ವಾದಿಯ ಸಾಕ್ಷಿ ವಿಚಾರಣೆಯಾದ ನಂತರವೇ ನನ್ನ ಪತಿಯು ಪ್ರತಿವಾದ ಪತ್ರವನ್ನು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ವಾದಿಯು ಹಾಜರು ಮಾಡಿರುವ ನಿ.ಪಿ.7 ವೀಲು ನಾಮೆಯ ದಿನಾಂಕವನ್ನು ಪರಿಶೀಲಿಸಿಯೇ ನಿ.ಡಿ.2 ವೀಲು ನಾಮೆಯ ದಿನಾಂಕವನ್ನು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ಪ್ರತಿವಾದ ಪತ್ರವನ್ನು ಸಲ್ಲಿಸಿದ ನಂತರ ವಿಳಂಬವಾಗಿ ನಿ.ಡಿ.2 ವೀಲು

ನಾಮೆಯನ್ನು ಹಾಜರು ಮಾಡಿರುತ್ತೇವೆ ಎಂದರೆ ಸರಿಯಲ್ಲ.

13. ಜಯಮ್ಮ ಮೃತಪಡುವಾಗ ಅವರಿಗೆ 80 ವರ್ಷ ವಯಸ್ಸಾಗಿತ್ತು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಪೂರ್ಣೇಶ್ ರವರು ಜಯಮ್ಮ ರವರ ತಂಗಿಯ ಮಗನಾಗಿರುತ್ತಾರೆ. ಪೂರ್ಣೇಶ್ ರವರು ಜಯಮ್ಮನನ್ನು ಅತ್ತೆ ಎಂದು ಕರೆಯುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ದೊಡ್ಡಮ್ಮ ಎಂದು ಕರೆಯುತ್ತಿದ್ದರು ಎಂದು ನುಡಿಯುತ್ತಾರೆ. ಜಯಮ್ಮ ರವರು ಪೂರ್ಣೇಶ್ ರವರ ಅತ್ತೆಯಾಗಿರುತ್ತಾರೆ ಎಂದರೆ ಸರಿಯಲ್ಲ. ಜಯಮ್ಮ ರವರ ಹೆಚ್ಚುವರಿ ಪಿಂಚಣಿ ಅರ್ಜಿ ಬರೆಯಿಸಲು ಪೂರ್ಣೇಶ್ ರವರ ಬಳಿ ಹೋಗುತ್ತಿದ್ದರು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವ ಬಿ ಶೆಡ್ಯೂಲ್ ಆಸ್ತಿಯ ಖಾತಾ ಬದಲಾವಣೆ ಮಾಡಲು ಜಯಮ್ಮ ರವರು ಪೂರ್ಣೇಶ್ ರವರ ಬಳಿ ಹೋಗುತ್ತಿದ್ದರು ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ಜಯಮ್ಮ ರವರಿಗೆ ಇದ್ದ ತರಿ ಜಮೀನಿನ ವ್ಯವಹಾರದ ಬಗ್ಗೆ ಪೂರ್ಣೇಶ್ ರವರ ಬಳಿ ಹೋಗುತ್ತಿದ್ದರು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಪೂರ್ಣೇಶ್ ರವರು ಸದರಿ ಸಂದರ್ಭಗಳಲ್ಲಿ ಖಾಲಿ ಹಾಳೆಗಳಿಗೆ ಜಯಮ್ಮ ರವರ ಸಹಿಗಳನ್ನು ಪಡೆಯುತ್ತಿದ್ದರು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆ ರೀತಿ ಖಾಲಿ ಹಾಳೆಗಳಿಗೆ ಪಡೆದಿರುವ ಸಹಿಗಳನ್ನು ದುರುಪಯೋಗ ಪಡಿಸಿ ನಿ.ಡಿ.2 ದಾಖಲೆಯನ್ನು ನಾನು, ನನ್ನ ಪತಿ ಮತ್ತು ಪೂರ್ಣೇಶ್ ರವರು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಿ.ಡಿ.2 ವೀಲು ನಾಮೆಗೆ ಜಯಮ್ಮ ರವರು ಎಷ್ಟು ಸಹಿಗಳನ್ನು ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿ.ಡಿ.2 ದಾಖಲೆಯ ಮುಖ ಪುಟದಲ್ಲಿ ಯಾವುದೇ ಸಹಿಗಳು ಇರುವುದಿಲ್ಲ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿ.ಡಿ.2 ದಾಖಲೆಗೆ ಯಾವುದೇ ಮಾರ್ಜಿನ್ ಬಿಟ್ಟಿರುವುದಿಲ್ಲ ಎಂದರೆ ಸಾಕ್ಷಿಯು ಜಯಮ್ಮ ಹೇಗೆ

ಬರೆಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿ.ಡಿ.2 ದಾಖಲೆಯ ಮೊದಲ ಪುಟದಲ್ಲಿ ಸಾಲುಗಳು ಒತ್ತು ಒತ್ತಾಗಿದೆ ಮತ್ತು 2 ನೇ ಪುಟದಲ್ಲಿ ಸಾಲುಗಳು ದೂರ ದೂರದಲ್ಲಿ ಇರುತ್ತವೆ ಎಂದರೆ ಸಾಕ್ಷಿಯು ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ರುಜು ಹಾಕಿರುವ ಖಾಲಿ ಹಾಳೆಗೆ ದಾಖಲೆಯನ್ನು ಸೃಷ್ಟಿ ಮಾಡಿರುವುದರಿಂದ ಆ ರೀತಿಯಾಗಿ ಬರವಣಿಗೆಯಾಗಿರುತ್ತದೆ ಎಂದರೆ ಸರಿಯಲ್ಲ. ನಿ.ಡಿ.2 ರ ಕೊನೆಯಲ್ಲಿ ಸ್ಥಳ ಮತ್ತು ದಿನಾಂಕವನ್ನು ನಮೂದು ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿ.ಡಿ.2 ದಾಖಲೆಯಲ್ಲಿ ದಾವ ಸಿ ಶೆಡ್ಯೂಲ್ ಆಸ್ತಿಯ ಬಗ್ಗೆ ಬರವಣಿಗೆಯಾಗಿರುತ್ತದೆ ಎಂದರೆ ಸರಿ. ಶಿವಾನಂದಪ್ಪ ರವರಿಗೆ ಈಗ 90 ವರ್ಷ ವಯಸ್ಸಾಗಿರುತ್ತದೆ. ಶಿವಾನಂದಪ್ಪ ಸಹಿ ಮಾಡಿರುವುದನ್ನು ನಾನು ಯಾವತ್ತೂ ನೋಡಿರುವುದಿಲ್ಲ. ಶಿವಾನಂದಪ್ಪ ರವರು ಜಯಮ್ಮನ ಹತ್ತಿರದ ಸಂಬಂಧಿಯಾಗಿರುತ್ತಾರೆ. ಏನು ಸಂಬಂಧ ಎಂದು ನನಗೆ ಹೇಳಲು ಸಾಧ್ಯವಿಲ್ಲ. ಎಂ.ಡಿ. ಇಂದ್ರೇಶ್ ರವರು ಜಯಮ್ಮನ ದೂರದ ಸಂಬಂಧಿಯಾಗಿರುತ್ತಾರೆ. ನಾನು ಶಿವಾನಂದಪ್ಪ ಮತ್ತು ಎಂ.ಡಿ. ಇಂದ್ರೇಶ್ ರವರ ಬಳಿ ನಿ.ಡಿ.2 ದಾಖಲೆಯ ಬಗ್ಗೆ ವಿಚಾರಿಸಿರುವುದಿಲ್ಲ. ನಿ.ಡಿ.1 ದಾಖಲೆಯ ಆಧಾರದ ಮೇಲೆ ನನ್ನ ಪತಿಯ ಹೆಸರಿಗೆ ಖಾತಾ ಬದಲಾವಣೆಯಾಗಿರುತ್ತದೆ ಎಂದರೆ ಸರಿ. ನಿ.ಡಿ.2 ದಾಖಲೆಯನ್ನು ನಂತರ ಸೃಷ್ಟಿ ಮಾಡಿರುವುದರಿಂದ ನನ್ನ ಪತಿಯ ಹೆಸರಿಗೆ ಖಾತಾ ಬದಲಾವಣೆಯಾಗುವ ಸಮಯದಲ್ಲಿ ನಿ.ಡಿ.2 ದಾಖಲೆಯನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ವಾದಿಗೆ ದಿನಾಂಕಃ 03.12.2016 ರಂದು ಜಯಮ್ಮ ರವರು ವೀಲು ನಾಮೆಯನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ಸದರಿ ವೀಲು ನಾಮೆಯನ್ನು ಸೃಷ್ಟಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನಿ.ಪಿ.7 ರಂತೆ

ಜಯಮ್ಮ ರವರು ಅವರ ಆಸ್ತಿಯು ಅವರ ನಂತರ ನಿರ್ಮಲ ರವರಿಗೆ ಸೇರಬೇಕು, ನಿರ್ಮಲ ರವರ ಪೌತಿ ನಂತರ ನಿರ್ಮಲ ರವರ ಮಗ ನವೀನನಿಗೆ ಸೇರಬೇಕು ಎಂದು ವೀಲು ಬರೆದಿರುತ್ತಾರೆ ಎಂದರೆ ಸಾಕ್ಷಿಯು ಸದರಿ ವೀಲು ಸೃಷ್ಟಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ವೀಲು ನಾಮೆಗೆ ನಂತರ ಜಯಮ್ಮ ರವರು ತಿದ್ದುಪಡಿ ಬರೆದಿರುತ್ತಾರೆ ಎಂದರೆ ಸರಿಯಲ್ಲ.

14. ನಿ.ಪಿ.7 ವೀಲು ನಾಮೆಯ ಪ್ರಕಾರ ವಾದಿಯು ದಾವ ಎ ಮತ್ತು ಬಿ ಶೆಡ್ಯೂಲ್ ಆಸ್ತಿಗಳನ್ನು ಖಾತೆ ಬದಲಾವಣೆ ಮಾಡಲು ಒಪ್ಪಿಗೆ ನೀಡುತ್ತೇನೆ ಎಂದು ನನ್ನ ಪತಿಯು ಒಪ್ಪಿದ್ದರು ಎಂದರೆ ಸರಿಯಲ್ಲ. ದಾವ ಸಿ ಶೆಡ್ಯೂಲ್ ಆಸ್ತಿಯನ್ನು ವಾದಿಯು ನಿರಂಜನ್ ರವರ ಹೆಸರಿಗೆ ಹಕ್ಕು ಕುಲಾಸೆ ಪತ್ರ ಬರೆದುಕೊಡಬೇಕು ಎಂದು ನನ್ನ ಪತಿಯು ಕೇಳಿದ್ದರು ಎಂದರೆ ಸರಿಯಲ್ಲ. ಸದರಿ ಮಾತನ್ನು ನಂಬಿ ವಾದಿಯು ತುರ್ತಾಗಿ ಖಾತೆ ದಾಖಲು ಮಾಡಲು ಪ್ರಯತ್ನಪಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಮೊದಲಿನ ವೀಲು ನಾಮೆಯು ನೊಂದಾಯಿತ ವೀಲು ನಾಮೆಯಾಗಿರುವುದರಿಂದ ಸದರಿ ವೀಲು ನಾಮೆಯು ರದ್ದತಿಯಾಗದೇ ನಂತರದ ವೀಲು ನಾಮೆ ಆಧಾರದಲ್ಲಿ ಖಾತೆ ಬದಲಾವಣೆ ಮಾಡಲು ತಾಲೂಕು ಕಚೇರಿಯಲ್ಲಿ ಒಪ್ಪಿರುವುದಿಲ್ಲ ಎಂದು ನುಡಿಯುತ್ತಾರೆ. ಪೂರ್ಣೇಶ್ ರವರು ದಾವ ಎ ಮತ್ತು ಬಿ ಶೆಡ್ಯೂಲ್ ಆಸ್ತಿಯನ್ನು ಖರೀದಿಮಾಡಬೇಕು ಎಂದು ಇಚ್ಚೆಯಿಂದ ನಾನು, ನನ್ನ ಪತಿ ಮತ್ತು ಪೂರ್ಣೇಶ್ ರವರು ಶಾಮೀಲ್ ಆಗಿ ಪಟ್ಟಣ ಪಂಚಾಯಿತಿಯಲ್ಲಿ ದಾವ ಎ ಶೆಡ್ಯೂಲ್ ಆಸ್ತಿಯ ಖಾತೆಯನ್ನು ನನ್ನ ಪತಿಯ ಹೆಸರಿನಲ್ಲಿ ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ. ಬಿ ಶೆಡ್ಯೂಲ್ ಆಸ್ತಿಯ ಖಾತೆಯನ್ನು ಕಂದಾಯ ಇಲಾಖೆಯಲ್ಲಿ ನಾನು, ನನ್ನ ಪತಿ ಮತ್ತು ಪೂರ್ಣೇಶ್ ರವರು ಶಾಮೀಲ್ ಆಗಿ ಮಾಡಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ದಾವ ಎ ಮತ್ತು ಬಿ ಶೆಡ್ಯೂಲ್ ಆಸ್ತಿಗಳ ಖಾತಾ ಬದಲಾವಣೆ

ಮಾಡಿರುವ ವಿಚಾರವು ವಾದಿಗೆ ತಡವಾಗಿ ಗೊತ್ತಾಗಿರುತ್ತದೆ ಎಂದರೆ ಸರಿಯಲ್ಲ. ವಾದಿಯು ನಂತರ ದಾವ ಸಿ ಶೆಡ್ಯೂಲ್ ಆಸ್ತಿಗಳ ದಾಖಲಾತಿಗಳನ್ನು ಪರಿಶೀಲಿಸಿದಾಗ ದಾನ ಪತ್ರದ ಮೂಲಕ ಖಾತಾ ಬದಲಾವಣೆ ಮಾಡಿರುವ ವಿಚಾರವು ಗೊತ್ತಾಗಿರುತ್ತದೆ ಎಂದರೆ ಸರಿಯಲ್ಲ. ದಾಖಲೆಗಳನ್ನು ಸೃಷ್ಟಿಸಿ ನನ್ನ ಪತಿಯ ಹೆಸರಿಗೆ ದಾವ ಆಸ್ತಿಗಳ ಖಾತೆಯನ್ನು ದಾಖಲು ಮಾಡಿಸಿರುತ್ತೇವೆ ಎಂದರೆ ಸರಿಯಲ್ಲ. ದಾವ ಆಸ್ತಿಯಲ್ಲಿ ನನಗೆ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಯು ನನ್ನ ಜೊತೆ ಅನೋನ್ಯವಾಗಿರುತ್ತಾರೆ ಎಂದರೆ ಸಾಕ್ಷಿಯು ನನ್ನ ಜೊತೆ, ವಾದಿಯ ಜೊತೆ ಅನೋನ್ಯವಾಗಿರುತ್ತಾರೆ ಎಂದು ನುಡಿಯುತ್ತಾರೆ. 2 ನೇ ಪ್ರತಿವಾದಿಯು ದಾವ ಬಿ ಶೆಡ್ಯೂಲ್ ಆಸ್ತಿಯನ್ನು ವಾದಿಗೆ ಮತ್ತು ದಾವ ಸಿ ಶೆಡ್ಯೂಲ್ ಆಸ್ತಿಯು ನನಗೆ ಎಂದು ಮತ್ತು ದಾವ ಎ ಶೆಡ್ಯೂಲ್ ಆಸ್ತಿಯಲ್ಲಿ 3 ಜನರಿಗೂ ಪಾಲು ಇರುತ್ತದೆ ಎಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ. ದಾವ ಆಸ್ತಿಯನ್ನು ಹಂಚಿಕೆ ಮಾಡಿರುವ ಬಗ್ಗೆ ನಾನು ಮತ್ತು 2 ನೇ ಪ್ರತಿವಾದಿಯು ಮಾತುಕತೆ ಮಾಡಿರುತ್ತೇವೆ ಎಂದರೆ ಸಾಕ್ಷಿಯು 2 ನೇ ಪ್ರತಿವಾದಿಯು ಒಂದು ಬಾರಿ ಎಲ್ಲರು ಆಸ್ತಿಗಳನ್ನು ಸಮಾನವಾಗಿ ಹಂಚಿಕೊಳ್ಳಿ ಎಂದು ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ಪ್ರಶ್ನೆಃ ದಾವ ಎ, ಬಿ ಮತ್ತು ಸಿ ಶೆಡ್ಯೂಲ್ ಆಸ್ತಿಗಳನ್ನು ಸಮಾನವಾಗಿ ಹಂಚಿಕೊಳ್ಳಲು ನಿಮಗೆ ಒಪ್ಪಿಗೆ ಇದೆಯಾ ಎಂಬ ಪ್ರಶ್ನೆಗೆ ಸಾಕ್ಷಿಯು ದಾವ ಎ ಮತ್ತು ಬಿ ಶೆಡ್ಯೂಲ್ ಆಸ್ತಿಗಳನ್ನು ಸಮಾನವಾಗಿ ಹಂಚಿಕೊಳ್ಳಲು ನನಗೆ ಯಾವುದೇ ಅಭ್ಯಂತರ ಇರುವುದಿಲ್ಲ ಎಂದು ನುಡಿಯುತ್ತಾರೆ. ಆದರೆ ದಾವ ಸಿ ಶೆಡ್ಯೂಲ್ ಆಸ್ತಿಯ ಬಗ್ಗೆ ಜಯಮ್ಮ ರವರು ನಿರಂಜನ್ ಮತ್ತು ನನ್ನ ಮಗ ಸತೀಶ್ ನ ಹೆಸರಿಗೆ ದಾನ ಪತ್ರ ಮಾಡಿರುವುದರಿಂದ ಸದರಿ ಆಸ್ತಿಯಲ್ಲಿ ಭಾಗ ಕೊಡಲು ನನಗೆ ಒಪ್ಪಿಗೆ ಇರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ

ಹೇಳಿರುವ ಎಲ್ಲಾ ವಿಚಾರಗಳು ಸತ್ಯಕ್ಕೆ ದೂರವಾಗಿವೆ ಎಂದರೆ ಸರಿಯಲ್ಲ.

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

**ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,**
**ಮೂಡಿಗೆರೆ.**

ಸಾಕ್ಷಿಯ ಸಹಿ

ಮಾ